ನಮ್ಮೊಳಗೊಂದು ರೋಮಾಂಚನವಾಗುತ್ತದಲ್ಲ, ಆ ರೋಮಾಂಚನದಲ್ಲಿಯೇ ಕೆಲವು ಕ್ಷಣಗಳ ಕಾಲ ನಾವು ಕಳೆದುಹೋಗುತ್ತೇವಲ್ಲ – ಆಗ ಸಿಗುವ ಪುಳಕವೇ ವಿನೂತನವಾದುದು.

ಈ ಬಸದಿ ನೋಡಿದಾಗಲೂ ಅಂತಹ ಪುಳಕವಾಗಿಯೇ ಆಗುತ್ತದೆ. ಒಂದು ಕಾಲದಲ್ಲಿ ಹೊಯ್ಸಳರ ರಾಜಧಾನಿ ದ್ವಾರಸಮುದ್ರದ ಮುಖ್ಯ ಭಾಗವಾಗಿತ್ತಂತೆ ಈ ಬಸದಿಹಳ್ಳಿ. ಹೊಯ್ಸಳರು ಆಳುವ ಪೂರ್ವದಲ್ಲಿಯೂ ಇದೊಂದು ಪುರಾತನ ಕೇಂದ್ರವಾಗಿತ್ತಂತೆ. ಗಂಗರ ಎರಡನೆಯ ಬೂತುಗನ ಕಾಲದಲ್ಲಿ ಇಲ್ಲಿ ಜೈನ ಮುನಿಯೊಬ್ಬರ ಸಮಾಧಿ ಇದ್ದ ಬಗ್ಗೆ ಕ್ರಿ.ಶ. 954ರ ಒಂದು ಶಾಸನವೂ ಇಲ್ಲಿ ದೊರೆತಿದೆ. ಹೊಯ್ಸಳ ರಾಜ ವಿಷ್ಣುವರ್ಧನ ವೈಷ್ಣವಧರ್ಮ ಪಾಲನೆ ಮಾಡುವ ಪೂರ್ವದಲ್ಲಿ ಜೈನಧರ್ಮವನ್ನು ಪ್ರಬಲವಾಗಿ ನಂಬಿದ್ದನು. ಅವನ ರಾಣಿ ಶಾಂತಲಾದೇವಿ ಬದುಕಿನ ಕಟ್ಟಕಡೆಯವರೆಗೂ ಜೈನಧರ್ಮವನ್ನು ಪಾಲನೆ ಮಾಡುತ್ತಿದ್ದಳಾದ್ದರಿಂದ, ಹೊಯ್ಸಳರು ಜೈನಬಸದಿಯನ್ನು ನಿರ್ಮಿಸುವ ವಿಶೇಷವಾದ ಆಸ್ಥೆ ಹೊಂದಿದ್ದರಂತೆ. ಪಾರ್ಶ್ವನಾಥ ಬಸದಿಯನ್ನು ಗಂಗರಾಜನ ಮಗ ಬೊಪ್ಪದೇವ ಕ್ರಿ.ಶ. 1133ರಲ್ಲಿ ನಿರ್ಮಿಸಿದನೆಂದೂ, ಶಾಂತಿನಾಥ ಬಸದಿಯನ್ನು ಕ್ರಿ.ಶ. 1192ರಲ್ಲಿ ಎರಡನೆಯ ವೀರಬಲ್ಲಾಳ ನಿರ್ಮಿಸಿದನೆಂದೂ, ಆದಿನಾಥ ಬಸದಿಯನ್ನು ಹನ್ನೆರಡನೆಯ ಶತಮಾನದಲ್ಲಿ ನಿರ್ಮಿಸಲಾಗಿದೆಯೆಂದೂ ಇತಿಹಾಸ ಸಾರುತ್ತದೆ.

## ಶಿಲ್ಪಕಲೆಯ ಜಾಡು ಹಿಡಿದು...

ಪಾರ್ಶ್ವನಾಥ ಬಸದಿ ಪ್ರವೇಶಿಸುತ್ತಿದ್ದಂತೆಯೇ ಕಗ್ಗತ್ತಲಿನ ನಿಗೂಢ ಲೋಕವೊಂದರ ಜಾಡೊಳಗೆ ಮುಳುಗಿದಂತೆ ಭಾಸವಾಗುತ್ತದೆ. ಆದರೂ ಹೊರಗಿನ ಬೆಳಕು ಒಂದಷ್ಟು ಬಸದಿಯ ಒಳ ಇಣುಕಿ ಕತ್ತಲು–ಬೆಳಕುಗಳ ಸಮ್ಮಿಶ್ರ ನೋಟದಲ್ಲಿ ಬಸದಿಯ ಕಲ್ಲು ಕಲ್ಲುಗಳಿಗೆ ಹೊಸ ಜೀವ ಸಿಗುತ್ತದೆ.

ಪಾರ್ಶ್ವನಾಥ ಬಸದಿಯನ್ನು ಗಂಗರಾಜನ ಮಗ ಬೊಪ್ಪದೇವ, ವಿಷ್ಣುವರ್ಧನನ ಆಳ್ವಿಕೆಯ ಕಾಲವಾದ ಕ್ರಿ.ಶ. 1133ರಲ್ಲಿ ನಿರ್ಮಿಸಿದ್ದನಂತೆ. ಈ ಬಸದಿಯ ಪ್ರತಿಷ್ಠಾಪನೆಯ ದಿನ ರಾಜ ವಿಷ್ಣುವರ್ಧನನಿಗೆ ಯುದ್ಧದಲ್ಲಿ ಜಯವಾದುದರಿಂದಲೂ ಹಾಗೂ ಅದೇ ಸಮಯದಲ್ಲಿ ಅವನ ಮೊದಲನೆಯ ಮಗ ಒಂದನೆಯ ನರಸಿಂಹನ ಜನನವಾದುದರಿಂದಲೂ ಬಸದಿಯ ದೇವರಿಗೆ ವಿಜಯ ಪಾರ್ಶ್ವನಾಥ ಎನ್ನುವ ಹೆಸರಿಡಲಾಯಿತಂತೆ.



ಮೌನದ ನೆಲೆ ಆದಿನಾಥ ಬಸದಿ

ಪಾರ್ಶ್ವನಾಥ ಬಸದಿಯ ನವರಂಗ ಜಗಲಿಯೇ ವಿಭಿನ್ನವಾದುದು. ಈ ಬಸದಿಯನ್ನು ನಿರ್ಮಿಸಿರುವುದು ಬಳಪದ ಕಲ್ಲಿನಿಂದ. ಈ ಬಸದಿಯ ವಿಶಾಲತೆ, ಅದು ಹಿಡಿದಿಟ್ಟುಕೊಂಡಿರುವ ಸೂಕ್ಷ್ಮ ಕೆತ್ತನೆ ಮತ್ತು ವಿನ್ಯಾಸಗಳುಳ್ಳ ಕಲ್ಲುಗಂಭಗಳು, ಗರ್ಭಗುಡಿ, ನವರಂಗಮಂಟಪ, ಬಸದಿಯ ಮೂಲೆ ಮೂಲೆಗಳಲ್ಲಿನ ಆಕರ್ಷಕ ಕೆತ್ತನೆಗಳು. ಕಂಬಗಳ ಮೃದುತ್ವ, ಬಲವಾದ ಕಲ್ಲಿನ ಭಾವಣೆಗಳು – ಇವೆಲ್ಲ ಮೊದಲ ಸಲ ಬಸದಿಯ ಒಳಹೊಕ್ಕ ಕೂಡಲೇ ನಮ್ಮನ್ನು ತಮ್ಮತ್ತ ಕರೆಯುವ, ಸೆಳೆಯುವ ಚೆಂದವೇ ಬೇರೆ.

ಪಾರ್ಶ್ವನಾಥ ಬಸದಿಯ ಮೂಲ ಆಕರ್ಷಣೆಯೇ 18 ಅಡಿ ಎತ್ತರದ ಪಾರ್ಶ್ವನಾಥ ಮೂರ್ತಿ. ಆ ಮೂರ್ತಿಯ ನುಣುಪು, ಕಲ್ಲಿನ ಹೊಳಪು, ಅಮೂರ್ತ ಸೌಂದರ್ಯ ಕಣ್ಣೊಳಗೆ ಮಿಂಚು ಮೂಡಿಸುತ್ತದೆ.

ಆದಿನಾಥ ಬಸದಿಯ ಪ್ರಾಂಗಣ, ಕಂಬಗಳ ಕೆತ್ತನೆ ಮನಮೋಹಕವಾಗಿದೆ. ಗರ್ಭಗೃಹ, ತೆರೆದ ಅಂತರಾಳ, ನವರಂಗ, ಮುಖಮಂಟಪಗಳು ಮತ್ತೆ ಮತ್ತೆ ನೋಡುವಂತಿದೆ. ಪಾರ್ಶ್ವನಾಥ ಬಸದಿಯಷ್ಟು ಇದು ವಿಶಾಲವಾದುದುದಲ್ಲ. ಆದರೆ ಮೂರು ಅಡಿ ಎತ್ತರದ ಆದಿನಾಥ ಮೂರ್ತಿಯ ಭವ್ಯತೆ, ಸೌಮ್ಯತೆ ಮಾತ್ರ ಅಮೂರ್ತವಾದುದು. ಅದರ ಪಕ್ಕದಲ್ಲೇ ಶಾಂತಿನಾಥ ಬಸದಿ ಇದೆ. ಸರಳ ಸೌಂದರ್ಯದಿಂದ ತುಂಬಿಕೊಂಡಿರುವ ಈ ಬಸದಿ ಪಾರ್ಶ್ವನಾಥ ಬಸದಿಯಷ್ಟೇ ವಿಶಾಲವಾದುದು. ದೊಡ್ಡದಾದ ಗರ್ಭಗೃಹ, ತೆರೆದ ಅಂತರಾಳ, ಅರ್ಧಮಂಟಪ, ಮತ್ತು ಮಹಾಮಂಟಪಗಳನ್ನು, ಅದನ್ನು ನಿರ್ಮಿಸಿದ ಶಿಲ್ಪಿಗಳ ಕಲಾಚತುರತೆಯನ್ನು ಮನಸ್ಸು ಒಳಗೊಳಗೆ ಕೊಂಡಾಡಿ ಹಿಗ್ಗುತ್ತದೆ.

ಈ ಬಸದಿಯ ಮುಂಭಾಗದಲ್ಲಿ ಎತ್ತರದ ಮಾನಸ್ತಂಭವಿದೆ. ಇದರ ಮೇಲಿರುವ ಕಿರುಮಂಟಪದೊಳಗೆ ಯಕ್ಷನ ಸುಂದರ ಶಿಲ್ಪವಿದೆ. ಬಸದಿಯ ಉತ್ತರದಲ್ಲಿ ಕಲ್ಯಾಣಿ ಇದೆ. ಈ ಬಸದಿಗೆ ವಿಜಯನಗರದ ಕಾಲದಲ್ಲಿ ಕಂಬಗಳಿರುವ ಮುಖಮಂಟಪವನ್ನು ಸೇರಿಸಲಾಗಿದೆಯಂತೆ.

ಇಲ್ಲಿರುವ ಶಾಂತಿನಾಥನ ಮೂರ್ತಿಯಂತೂ ನಮ್ಮೊಳಗೆ ಶಾಂತಿಯ ಸ್ಥಾಯಿಭಾವವನ್ನು ಉಕ್ಕಿಸುತ್ತದೆ. ಮೂರೂ ಬಸದಿಯ ತೀರ್ಥಂಕರರ ಈ ಮೂರ್ತಿಗಳು ಈಗಲೂ ಲೋಕಶಾಂತಿಯನ್ನು ನಮ್ಮ ಕಣ್ಣೆದುರು ಪ್ರತ್ಯಕ್ಷವಾಗಿ ನಿಂತು ಸಾರುತ್ತಿರುವಂತೆ ಅನ್ನಿಸಿ ಎದೆಯಲ್ಲಿ ನಿಜಕ್ಕೂ ಹೊಸಲೋಕವೊಂದು ತೆರೆದುಕೊಂಡಂತಾಗುತ್ತದೆ. ಅಂತೂ ಈ ಮೂವರು ಪ್ರಮುಖ ತೀರ್ಥಂಕರರ ಮೂರ್ತಿಗಳುಳ್ಳ ಬಸದಿಗಳು ಧಾರ್ಮಿಕ ಭಾವನೆಯಿಂದಷ್ಟೇ ಮಹತ್ವವಾದುದಲ್ಲ. ಹೊಯ್ಸಳರ ಕಾಲದ ಶಿಲ್ಪಕಲೆ ಅದೆಷ್ಟು ಉತ್ಕೃಷ್ಟವಾಗಿತ್ತು, ಶಿಲ್ಪಿಗಳ ಕಲಾನೈಪುಣ್ಯತೆ ಅದೆಷ್ಟು ಉನ್ನತವಾಗಿತ್ತು ಎನ್ನುವುದಕ್ಕೆ ಈ ಬಸದಿಗಳು ಸಾಕ್ಷೀಭೂತವಾಗಿವೆ.

ಬೆಳಗ್ಗೆ ಬಸದಿಯ ಪಿಸುಮಾತುಗಳೊಳಗೆ ಇಳಿದವರು, ಆ ಮಾತುಗಳನ್ನು, ಮೌನವನ್ನು ಧೇನಿಸುತ್ತ ಆಸ್ವಾದಿಸುತ್ತ ಸಮಯ ಜಾರಿದಾಗ ಸೂರ್ಯ ನಡುನೆತ್ತಿಗೆ ಬಂದಿದ್ದ. ಸಾಮಾನ್ಯವಾಗಿ ಪ್ರವಾಸಿಗರೆಲ್ಲಾ ಬರೀ ಹಳೇಬೀಡಿನ ಹೊಯ್ಸಳೇಶ್ವರ, ಕೇದಾರೇಶ್ವರ ದೇವಸ್ಥಾನಗಳನ್ನಷ್ಟೇ ನೋಡಿ ಮರಳುತ್ತಾರಾದ್ದರಿಂದ ಮಧ್ಯಾಹ್ನದವರೆಗೂ ಬೇರೆ ಯಾವ ಪ್ರವಾಸಿಗರೂ ಬಸದಿಗೆ ಬರಲಿಲ್ಲ. ಟಿಟ್ಟಿಭ ಹಕ್ಕಿಗಳು, ಸಾಲುಸಾಲಾಗಿ ಮೂರೂ ಬಸದಿಗಳ ಮೇಲಿನಿಂದ ಹಗುರನೇ ರೆಕ್ಕೆ ಬಡಿದು ಆಕಾಶದಲ್ಲಿ ತೇಲಿಹೋಗುತ್ತಿದ್ದುವು, ಆ ರೆಕ್ಕೆಗಳ ತಣ್ಣಗಿನ ಬೀಸುಗಾಳಿಗೆ, ಆಹಾ ಎನ್ನುತ್ತಾ ಇಡೀ ಬಸದಿಯೇ ಸುಖದಿಂದ ಪುಳಕಿತವಾದಂತೆ ಕಂಡಿತು.

ಪ್ರತಿಕ್ರಿಯಿಸಿ: feedback@sudha.co.in